ಶ್ರೀ ಪಿ.ಜಿ.ಆರ್.ಸಿಂಧ್ಯಾ:- ಅಧ್ಯಕ್ಷರೇ ನೋಟಿಸ್ ಕೊಟ್ಟಿರುವವರು ಹೊಸದಾಗಿ ಸದನಕ್ಕೆ ಬಂದಿದ್ದಾರೆ. ವೈ.ರಾಮಕೃಷ್ಣ ಅವರು ಐದಾರು ವರ್ಷ ಈ ಸದನದಲ್ಲಿರಲಿಲ್ಲ. ನಿಯಮ 351ರ ಕೆಳಿಗೆ ಸದಸ್ಯರು ಏನು ಪ್ರಶ್ನೆ ಕೇಳುತ್ತೀರಿ ಅದಕ್ಕೆ ಸಮಂಜಸವಾದ ಉತ್ತರ ಕೊಡುವುದು ಸರ್ಕಾರದ ಕರ್ತವ್ಯ. ಸರ್ಕಾರದ ಪರವಾಗಿ ಉತ್ತರ ಒದಗಿಸಿಕೊಡುತ್ತೇನೆಂದು ಹೇಳಿದ ಮೇಲೆ ಕೊಡದೇ ಹೋದರೆ ನಾನು ಈ ಗೌರವಾನ್ವಿತ ಸದಸ್ಯಸ್ಥಾನವನ್ನು ಕಳಿದುಕೊಳ್ಳಬೇಕಾಗುತ್ತದೆ. ಅದರ ಅರಿವು ನನಗಿದೆ. ಸರ್ಕಾರದ ಪರವಾಗಿ ಹೇಳುತ್ತಿದ್ದೇನೆ, ಉತ್ತರವನ್ನು ಒದಗಿಸಿಕೊಡುತ್ತೇವೆ ಎಂದು.

ಶ್ರೀ ವಿಶ್ವೇಶ್ವರ ಹೆಗಡೆ:- ಅಧ್ಯಕ್ಷರೆ, ನಾವು ಕಿರಿಯ ಸದಸ್ಯರಿದ್ದೇವೆ, ನಮಗೆ ಅನುಭವದ ಕೊರತೆ ಇದೆ, ನಾವು ಹಿರಿಯರಲ್ಲ ಎಂದು ಒಪ್ಪಿಕೊಳ್ಳುತ್ತೇವೆ. ಆದರೆ ಅವರು ಗಮನ ಸೆಳೆಯುವ ಸೂಚನೆ ತಂದಾಗ ಸಚಿವರಿದ್ದು ಉತ್ತರ ಕೊಡಬೇಕಾಗಿತ್ತು ಆದರೆ ಇಲ್ಲಿ ಉತ್ತರವೂ ಸಿದ್ಧವಿಲ್ಲ, ತರಿಸಿಕೊಡುತ್ತೇವೆಂದರೆ ಯಾವಾಗ ತರಿಸಿಕೊಡುತ್ತಾರೆ? ಎಷ್ಟು ದಿನದಲ್ಲಿ ತರಿಸಿಕೊಡುತ್ತಾರೆ, ಅದರ ಮೇಲೆ ಯಾವಾಗ ಕ್ರಮ ತೆಗೆದುಕೊಳ್ಳುತ್ತಾರೆ? ಆ ಉತ್ತರ ನೋಡಿದ್ದರೆ ನಮಗೊಂದು ವಿಶ್ವಾಸ ಬರುತ್ತಿತ್ತು, ಉತ್ತರವನ್ನು ಯಾವಾಗ ತರಿಸಿಕೊಡಬೇಕೆಂದು ಸರ್ಕಾರಕ್ಕೆ ಜವಬ್ದಾರಿ ಇಲ್ಲವೇ ಉತ್ತರವನ್ನು ಯಾವಾಗ ತರಿಸಿಕೊಡುತ್ತಾರೆ? ಇವತ್ತು ಸಂಜೆ ಒಳಗೆ ಉತ್ತರ ತರಿಸಿಕೊಡುತ್ತೇನೆಂಬ ಆಶ್ವಾಸನೆಯನ್ನು ನೀವು ಕೊಡಿಸಬೇಕು ಅಧ್ಯಕ್ಷರೇ.

ಶ್ರೀ ಪಿ.ಜಿ.ಆರ್.ಸಿಂಧ್ಯಾ:- ಉಪಾಧ್ಯಕ್ಷರೇ ಇದು ಗಮನ ಸೆಳೆಯುವಂತಹ ಪ್ರಶ್ನೆಯಲ್ಲ. ನಿಯಮ 351 ರ ಪ್ರಕಾರ ಸರ್ಕಾರದ ಗಮನಕ್ಕೆ ತರುವುದಷ್ಟೇ. ಉತ್ತರವನ್ನು ಕಳಿಸಿಕೊಡಲಾಗುತ್ತದೆ.

5) ಕಾರ್ಕಳ ನಗರದ ಶಬರಿ ಆಶ್ರಮದ ಹರಿಜನ ಸೇವಾ ಸಂಘದ ವಾರ್ಡನ್ನಿನ ಹೆಂಡತಿಗೆ ಅಲ್ಲಿಯ ನಿವಾಸ ಸ್ಥಳವನ್ನು ಬಿಟ್ಟು ಕೊಡುವ ಬಗ್ಗೆ

ಶ್ರೀ ಕುಂಬ್ಳೆ ಸುಂದರ್‌ರಾವ್: ಅಧ್ಯಕ್ಷರೇ ಕಾರ್ಕಳ ನಗರದ ಶಬರಿ ಆಶ್ರಮದ ಹರಿಜನ ಸೇವಾ ಸಂಘದ ವಾರ್ಡನ್ನಿನ ಹೆಂಡತಿಗೆ ಅಲ್ಲಿಯ ನಿವಾಸ ಸ್ಥಳವನ್ನು ಬಿಟ್ಟುಕೊಡುವ ಬಗ್ಗೆ ಗಮನ ಸೆಳೆಯುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯ:- ಉಪಾಧ್ಯಕ್ಷರೇ ಗ್ರಾಮೀಣಾಭಿವೃದ್ಧಿ ಸಚಿವರಲ್ಲಿ ಅವರ ಪರವಾಗಿ ನಾನು ಮಾನ್ಯ ಸದಸ್ಯರಿಗೆ ಭರವಸೆ ಕೊಡುತ್ತಿದ್ದೇನೆ. ಅವರಿಗೆ ನಂತರ ಉತ್ತರವನ್ನು ಒದಗಿಸಿಕೊಡಲಾಗುವುದು.

ನಿಯಮ 69 ರ ನಿಯಮದಡಿ ಸಾರ್ವಜನಿಕ ಮಹತ್ವದ ಬಗ್ಗೆ - ಬರಗಾಲದ ಬಗ್ಗೆ ಚರ್ಚೆ

+ಶ್ರೀ ಎಸ್.ಬಂಗಾರಪ್ಪ (ಸೊರಬ):- ಮಾನ್ಯ ಅಧ್ಯಕ್ಷರೇ, ಬರಗಾಲದ ಬಗ್ಗೆ ಮುಂದುವರಿದಿರುವ ಚರ್ಚೆಯನ್ನು ಈಗ ಮತ್ತೆ ಕೈಗೆತ್ತಿಕೊಳ್ಳುತ್ತಿದ್ದೇವೆ. ಬರಗಾಲದ ಚರ್ಚೆಗೋಸ್ಕರವೇ ಈ ಅಧಿವೇಶನ ಕರೆದದ್ದು, ನಾವೆಲ್ಲ ಚರ್ಚೆಗಾಗಿ ಸೇರಿದ್ದುದು ಬರಗಾಲದ ಚರ್ಚೆ ಪ್ರಾರಂಭವಾದ ಸನ್ನಿವೇಶ ಆಗೇನಿತ್ತು ಈಗಲೂ ಅನೇಕ ಭಾಗದಲ್ಲಿ ಬರಗಾಲದ ಛಾಯೆ ಇದ್ದರೂ ಕೂಡ ರಾಜ್ಯದ ಅನೇಕ ಕಡೆ ಮಳೆ ಬಿದ್ದಿರುವುದು ಸ್ವಲ್ಪ ಸಂತೋಷ ಕೊಡುವ ಸಂಗತಿಯೂ ಹೌದು. ನಾನು ದೊಡ್ಡ ಭಾಷಣ ಮಾಡುವ ಅವಶ್ಯಕತೆ ಇಲ್ಲವೆಂದು ಭಾವಿಸಿದ್ದೇನೆ. ಸರ್ಕಾರದ ಪರವಾಗಿ ಕಂದಾಯ ಸಚಿವರು ಕೊಟ್ಟಿರುವ ಹೇಳಿಕೆ ಕೂಡ ನಮ್ಮ ಹತ್ತಿರ ಇದೆ. ಯಾವ್ಯಾವ ಭಾಗದಲ್ಲಿ ಎಷ್ಟೆಷ್ಟು ಮಳೆ ಬಿದ್ದಿದೆ. ಎಷ್ಟು ಆಫೆಕ್ಟೆಡ್ ತಾಲೂಕುಗಳು, ಇನ್ನೂ ಎಷ್ಟು ತಾಲೂಕುಗಳಲ್ಲಿ ಮಳೆಯಾಗಿಲ್ಲವೆಂಬ ವಿವರ ಕೊಟ್ಟಿದ್ದೀರಿ. ಹಣ ಬಿಡುಗಡೆ ಮಾಡಿರುವ ಬಗ್ಗೆಯೂ ತಾವು ಹೇಳಿಕೆ ಕೊಟ್ಟಿದ್ದೀರಿ. ಮತ್ತು ಆಫೆಕ್ಟೆಡ್ ಮತ್ತು